Pratham Mysore
Every Child in School and Learning Well

ಮಾಡಿರಿ-ನೋಡಿರಿ-ಕಲಿಯಿರಿ

# ಪ್ರಜ್ಞಾನ ಪತ್ರಿಕೆ

***25-02-2023*** ***ಪ್ರಥಮ್ ಮೈಸೂರ್ ಪ್ರೇರಿತ*** ***ಸಂಚಿಕೆ-16***

**ಹಿಂದಿನ ಸಂಚಿಕೆಯಿಂದ ....**

**ಹಣ್ಣುಗಳು,ಜೇನುತುಪ್ಪ ಮತ್ತು ಹಾಲಿನಲ್ಲಿರುವ ಸಕ್ಕರೆಯ ಅಂಶ:-**



ಹಣ್ಣು ಮತ್ತು ಜೇನುತುಪ್ಪದಲ್ಲಿರುವ ಸಕ್ಕರೆ ಅಂಶವನ್ನು ಫ್ರಕ್ಟೋಸ್ ಎನ್ನುತ್ತೇವೆ. ಹಾಲಿನಲ್ಲಿರುವ ಸಕ್ಕರೆ ಅಂಶ ಲ್ಯಾಕ್ಟೋಸ್ ಮತ್ತು ಸಕ್ಕರೆಯಲ್ಲಿರುವ ಅಂಶ ಸುಕ್ರೋಸ್.

**ಕಲ್ಲುಸಕ್ಕರೆ:-**



ಕಲ್ಲುಸಕ್ಕರೆಯನ್ನು ತಯಾರಿಸುವ ಸಮಯದಲ್ಲಿ ಕಬ್ಬಿನ ರಸವನ್ನು ಹೆಚ್ಚು ಸಂಸ್ಕರಿಸದೆ ಜೊತೆಗೆ ಶುದ್ಧ ಹಾಲನ್ನು ಸೇರಿಸುವುದರಿಂದ ಕಲ್ಲುಸಕ್ಕರೆಯೂ ಔಷಧಿಯ ಗುಣವನ್ನು ಪಡೆಯುತ್ತದೆ

**ಇದರಲ್ಲಿ ಎರಡು ವಿಧ:** -
1)ಕೆಂಪುಕಲ್ಲುಸಕ್ಕರೆ 2)ಬಿಳಿಕಲ್ಲುಸಕ್ಕರೆ.

**ಕಲ್ಲುಸಕ್ಕರೆಯ ಉಪಯೋಗಗಳು:-**

I. ಒಣ ಕೆಮ್ಮು ಇರುವಾಗ ಕೆಂಪುಕಲ್ಲುಸಕ್ಕರೆಯನ್ನು ಒಂದು ಚೂರು ಬಾಯಲ್ಲಿ ಇಟ್ಟುಕೊಂಡು ರಸವನ್ನು ತೆಗೆದು ಕೊಳ್ಳುವುದರಿಂದ ಕಫ ಕಡಿಮೆಯಾಗಿ ಸ್ವಲ್ಪ ದೇಹಕ್ಕೆ ಶಮನ ಕೊಡುತ್ತದೆ.

II. ಕಲ್ಲುಸಕ್ಕರೆ,ಇಂದ ನಾವು ದಿನ ನಿತ್ಯ ಬಳಸುವ ಶುದ್ಧ ನೀರಿಗೆ ಒಂದು ಚೂರು ಕಲ್ಲು ಸಕ್ಕರೆಯನ್ನು ಬೆರೆಸಿ ಕುಡಿಯುವುದರಿಂದ ಕಣ್ಣಿನ ದೃಷ್ಟಿ ಉತ್ತಮವಾಗಿರುತ್ತದೆ.

III. ಕುಡಿಯುವ ಹಾಲಿಗೆ ಸಕ್ಕರೆಯ ಬದಲು ಕಲ್ಲುಸಕ್ಕರೆ ಅಥವಾ ಬೆಲ್ಲವನ್ನು ಉಪಯೋಗಿಸುವುದು ಉತ್ತಮ ಆಯ್ಕೆ.

**ಸರ್ ಚಂದ್ರಶೇಖರ ವೆಂಕಟರಾಮನ್ (1888-1970)**



ಚಂದ್ರಶೇಖರ ವೆಂಕಟಾರಾಮನ್, ನವೆಂಬರ್ 7, 1888 ರಲ್ಲಿ ತಮಿಳುನಾಡುನ ತಿರುಚಿನಾಪಳ್ಳಿ ಜಿಲ್ಲೆಯ 'ತಿರುವನೈಕಾವಲ್' ಎಂಬಲ್ಲಿ ಜನಿಸಿದರು. ಅವರ ತಂದೆ, ಚಂದ್ರಶೇಖರ್ ಕಾಲೇಜಿನಲ್ಲಿ ಭೌತಶಾಸ್ತ್ರ ಪ್ರಾಧ್ಯಾಪಕರಾಗಿದ್ದರು. ತಾಯಿಯವರ ಹೆಸರು, ಪಾರ್ವತಿ ಅಮ್ಮಾಳ್. ಮೇಧಾವಿಯಾಗಿದ್ದ ರಾಮನ್ ರವರು ವಿದ್ಯಾಭ್ಯಾಸ ಹಾಗೂ ವೃತ್ತಿಜೀವನದಲ್ಲಿ ಮಾಡಿದ ಸಾಧನೆ ಅಪಾರವಾಗಿತ್ತು. ಚಂದ್ರಶೇಖರ ವೆಂಕಟರಾಮನ್ ರವರು, ನೋಬೆಲ್ ಪ್ರಶಸ್ತಿ ಗಳಿಸಿದ, ಪ್ರಪ್ರಥಮ ಭಾರತೀಯ ವಿಜ್ಞಾನಿ.ಈ ಪ್ರಶಸ್ತಿಯನ್ನು 1930 ರಲ್ಲಿ ಅವರದೇ ಹೆಸರಿಂದ ಅಲಂಕೃತವಾದ "ರಾಮನ್ ಎಫೆಕ್ಟ್" ಎಂಬ ಶೋಧನೆಗಾಗಿ ಭೌತಶಾಸ್ತ್ರ ಕ್ಷೇತ್ರದಲ್ಲಿ ಪಡೆದರು.

**ರಾಮನ್ ಪರಿಣಾಮ**:- ಸಣ್ಣ ಕಣದ ಮೂಲಕ ಬೆಳಕನ್ನು ಹಾಯಿಸಿದಾಗ ಅದರಲ್ಲಿ ಉಂಟಾಗುವ ವ್ಯತ್ಯಾಸವನ್ನು (ಚದುರುವಿಕೆ) 'ರಾಮನ್ ಎಫೆಕ್ಟ್ ' ಎಂದು ಖ್ಯಾತಿ ಪಡೆದಿದೆ.

**ರಾಮನ್ ಪರಿಣಾಮದ ಉಪಯೋಗಗಳು:-**
1)ದೂರಸಂಪರ್ಕ ಉದ್ಯಮದಲ್ಲಿ, ಕೃಷಿಕಾರ್ಯಗಳಲ್ಲಿ,ಔಷಧಿಯ ತಯಾರಿಕೆಯಲ್ಲಿ ರಿಮೋಟ್ ಸೆನ್ಸಿಂಗ್, ಗ್ರಹಗಳ ಅನ್ವೇಷಣೆ ಮತ್ತು ವಿವಿಧ ಸೌರವ್ಯೂಹದ ಗ್ರಹಗಳಲ್ಲಿ ಖನಿಜಗಳನ್ನು ಕಂಡುಹಿಡಿಯಲು ,ತಂತ್ರಜ್ಞಾನದಲ್ಲಿ ಮತ್ತು ಇನ್ನಿತರ ರಾಸಾಯನಿಕ ಅಂಶವನ್ನು ಕಂಡುಹಿಡಿಯಲು ಬಳಸುತ್ತಾರೆ.

**"ಜಾಗತಿಕ ಸ್ವಾಸ್ಥ್ಯಕ್ಕಾಗಿ ಜಾಗತಿಕ ವಿಜ್ಞಾನ" :-**
1). ಕೇಂದ್ರ ಸಚಿವ ಡಾ.ಜಿತೇಂದ್ರ ಸಿಂಗ್ ಅವರು ರಾಷ್ಟ್ರೀಯ ವಿಜ್ಞಾನ ದಿನ 2023 ರ ಧ್ಯೇಯವನ್ನು "ಜಾಗತಿಕ ಸ್ವಾಸ್ಥ್ಯಕ್ಕಾಗಿ ಜಾಗತಿಕ ವಿಜ್ಞಾನ" ಎಂದು ಘೋಷಿಸಿದರು.
2).ಜಾಗತಿಕ ಸ್ವಾಸ್ಥ್ಯಕ್ಕಾಗಿ ಜಾಗತಿಕ ವಿಜ್ಞಾನ" ಎಂಬ ವಿಷಯವು ಜಾಗತಿಕ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಮತ್ತು ವಿಶ್ವಾದ್ಯಂತ ಯೋಗಕ್ಷೇಮವನ್ನು ಉತ್ತೇಜಿಸುವಲ್ಲಿ, ವಿಜ್ಞಾನದ ಪ್ರಾಮುಖ್ಯತೆಯನ್ನು ಪ್ರತಿಬಿಂಬಿಸುತ್ತದೆ. ಹಾಗೂ ನಮ್ಮ ರಾಷ್ಟ್ರದ ಯುವಜನತೆ ವಿಜ್ಞಾನ ಪ್ರಯೋಗ ಮತ್ತು ಸಂಶೋಧನೆಗಳನ್ನು ಕೈಗೊಳ್ಳುವ ಉದ್ದೇಶವನ್ನು ಹೊಂದಿದೆ.

Announcements

**ಪ್ರಥಮ್ ಚಟುವಟಿಕೆ ಮತ್ತು ಸಂಪನ್ಮೂಲ ಕೇಂದ್ರ**
ಹಿರಿಯ ಪ್ರಾಥಮಿಕ ಮಟ್ಟದಲ್ಲಿ ವಿಜ್ಞಾನ ಕಲಿಯಲು,ಕಲಿಸಲು ನಮ್ಮ ಕೇಂದ್ರ ಉತ್ತಮವಾಗಿದೆ.ಸದಸ್ಯತ್ವ ಉಚಿತ. ಸ್ವಯಂ ಸೇವಕರಾಗಲು ಅವಕಾಶವಿದೆ.
**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : +919110477512**